**0303**

# Third Semester of Three Year LL.B. Degree Examination, June/July 2012
## CRIMINAL LAW – II
## Criminal Procedure Code 1973, Juvenile Justice (Care and Protection of Children) Act, 2000 and Probation of Offenders Act 1958 (Course – III)

Duration : 3 Hours Max. Marks : 100

**Instructions** : 1. Answer all **5** Questions.
2. **One** essay type and **one** short note question or problem from **each unit** have to be attempted, which is referred as part (**a**) and (**b**) in all the units.
3. Figures to the **right** indicate **marks**.
4. Answers should be written **either** in **English** or **Kannada completely**.

**UNIT – I**

Q. No. 1. (a) Explain the procedure prescribed for the trial of "Summons" cases. Marks : 15
''ಸಮನ್ಸ್'' ಪ್ರಕರಣಗಳ ವಿಚಾರಣೆಗಾಗಿ ಗೊತ್ತುಪಡಿಸಿರುವ ಪ್ರಕ್ರಿಯೆಯನ್ನು ವಿವರಿಸಿರಿ.

OR/**ಅಥವಾ**

What is first information report ? Explain the procedure for recording first information report with its evidentiary value.
ಪ್ರಥಮ ಮಾಹಿತಿ ವರದಿ ಎಂದರೇನು ? ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿಕೊಳ್ಳುವ ಪ್ರಕ್ರಿಯೆಯ ಜೊತೆಗೆ ಅದರ ಸಾಕ್ಷ್ಯ ಮೌಲ್ಯವನ್ನು ವಿವರಿಸಿರಿ.

(b) Write short notes : Marks : 5
ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ :

Arrest by magistrate.
ದಂಡಾಧಿಕಾರಿಯಿಂದ ಬಂಧನ.

OR/**ಅಥವಾ**

Complaint.
ಫಿರ್ಯಾದಿ.

**UNIT – II**

Q. No. 2. (a) What is Taking cognizance of offence ? Discuss the limitations on the powers of court to take cognizance of an offence. Marks : 15
ಅಪರಾಧದ ಸಂಜ್ಞೆ ತೆಗೆದುಕೊಳ್ಳುವಿಕೆ ಎಂದರೇನು ? ಒಂದು ಅಪರಾಧದ ಸಂಜ್ಞೆ ತೆಗೆದುಕೊಳ್ಳಲು ನ್ಯಾಯಾಲಯಕ್ಕೆ ಇರುವ ಅಧಿಕಾರಗಳ ಮಿತಿಗಳನ್ನು ಚರ್ಚಿಸಿರಿ.

OR/**ಅಥವಾ**

Discuss the procedure to be followed by criminal courts in compelling the appearance of a person.
ಅಪರಾಧಿಕ ನ್ಯಾಯಾಲಯಗಳಲ್ಲಿ ಒಬ್ಬ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಿಸಲು ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ಚರ್ಚಿಸಿರಿ.

(b) Santosh and Suresh, accused in a non-bailable offence, are in judicial custody for more than 3 months and the police have not filed charge sheet against them. Now they want to seek bail as of right. Will they succeed ? Marks : 5

ಜಾಮೀನು ಇಲ್ಲದ ಅಪರಾಧಗಳ ಆಪಾದಿತರಾದ ಸಂತೋಷ ಮತ್ತು ಸುರೇಶ ಕಳೆದ ಮೂರು ತಿಂಗಳಿಗೆ ಮೇಲ್ಪಟ್ಟು ನ್ಯಾಯಾಂಗಿಕ ಅಭಿರಕ್ಷೆಯಲ್ಲಿದ್ದಾರೆ. ಪೋಲಿಸರು ಅವರ ವಿರುದ್ಧ ಇನ್ನು ದೋಷಾರೋಪಣೆಯನ್ನು ಸಲ್ಲಿಸಿಲ್ಲ. ಈಗ ಅವರು ಹಕ್ಕುಬದ್ಧವಾಗಿ ಜಾಮೀನು ಪಡೆದುಕೊಳ್ಳಲು ಇಚ್ಛಿಸಿದ್ದಾರೆ. ಅವರು ಯಶಸ್ವಿಯಾಗುವರೆ ?

OR/**ಅಥವಾ**

'A' is accused of an offence. The court has altered the charge without explaining it to him. 'A' is convicted for the said offence. Is the conviction legal ?

'ಅ' ನು ಒಂದು ಅಪರಾಧಕ್ಕಾಗಿ ಆಪಾದಿತನಾಗಿದ್ದಾನೆ. ನ್ಯಾಯಾಲಯವು ವಿವರಣೆಯನ್ನು ನೀಡದೆ ಅವನ ವಿರುದ್ಧದ ಆರೋಪವನ್ನು ಬದಲಾಯಿಸಿತು. 'ಅ' ನಿಗೆ ಆ ಅಪರಾಧಕ್ಕಾಗಿ ಶಿಕ್ಷೆ ನೀಡಲಾಯಿತು. ಈ ಶಿಕ್ಷೆಯು ಕಾನೂನು ಬದ್ಧವೇ ?

## UNIT – III

Q. No. 3. (a) Discuss the provisions of Cr. P.C. relating to security for keeping peace and good behaviour. Marks : 15

ಅಪರಾಧಿಕಾ ಪ್ರಕ್ರಿಯಾ ಸಂಹಿತೆಯಲ್ಲಿನ ಶಾಂತಿ ಮತ್ತು ಸುನಡತೆಯ ಭದ್ರತೆ ಕುರಿತಾದ ಉಪಬಂಧಗಳನ್ನು ಚರ್ಚಿಸಿರಿ.

OR/**ಅಥವಾ**

Explain the provisions of Cr. P. C. relating to Reference and Revision.

ಅಪರಾಧಿಕಾ ಪ್ರಕ್ರಿಯೆ ಸಂಹಿತೆಯಲ್ಲಿನ ಉಲ್ಲೇಖ ಮತ್ತು ಪರಿಷ್ಕರಣೆಗೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿರಿ.

(b) Ramesh got divorce degree against his wife Rekha. Now Rekha intends to claim maintenance from Ramesh. Advice her. Marks : 5

ರಮೇಶನು ತನ್ನ ಹೆಂಡತಿಯಾದ ರೇಖಾಳ ವಿರುದ್ಧ ವಿಚ್ಛೇದನಾ ಡಿಕ್ರಿಯನ್ನು ಪಡೆದಿದ್ದಾನೆ. ಈಗ ರೇಖಾಳು ರಮೇಶನಿಂದ ಜೀವನಾಂಶ ಕೇಳಲು ಇಚ್ಛಿಸಿದ್ದಾಳೆ. ಅವಳಿಗೆ ಸಲಹೆ ನೀಡಿರಿ.

OR/**ಅಥವಾ**

'A' a Telugu speaking accused is tried at Hublic court. All witnesses deposed in Kannada. 'A' wants the same to be interpreted to him in Telugu. The court rejects his prayer. Decide.

ತೆಲುಗು ಭಾಷೆ ಬಲ್ಲ 'ಅ' ಎಂಬ ಆರೋಪಿಯನ್ನು ಹುಬ್ಬಳ್ಳಿ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಲಾಗಿದೆ. ಎಲ್ಲ ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ಕನ್ನಡ ಭಾಷೆಯಲ್ಲಿ ನೀಡಿದ್ದಾರೆ. ಈ ಹೇಳಿಕೆಗಳನ್ನು ತನಗೆ ತೆಲುಗು ಭಾಷೆಯಲ್ಲಿ ಅರ್ಥೈಯಿಸಿ ಹೇಳಬೇಕೆಂದು 'ಅ' ನು ಕೋರಿಕೊಳ್ಳುತ್ತಾನೆ. ನ್ಯಾಯಾಲಯವು ಆತನ ಕೋರಿಕೆಯನ್ನು ತಿರಸ್ಕರಿಸುತ್ತದೆ. ನಿರ್ಧರಿಸಿರಿ.

## UNIT – IV

Q. No. 4. (a) Discuss the provisions relating to time limitations for taking cognizance of certain offences. Marks : 15

ಕೆಲವು ಅಪರಾಧಗಳ ಸಂಜ್ಞೆಯನ್ನು ತೆಗೆದುಕೊಳ್ಳಲು ಇರುವ ಕಾಲಮಿತಿಗೆ ಸಂಬಂಧಿಸಿದ ಉಪಬಂಧಗಳನ್ನು ಚರ್ಚಿಸಿರಿ.

OR/**ಅಥವಾ**

Explain the provisions relating to compounding of offences.

ಅಪರಾಧಗಳನ್ನು ರಾಜಿಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿರಿ.

(b) Write short notes on preventive action of police. Marks : 5

ಪೋಲಿಸರ ನಿರೋಧಕ (ತಡೆಯುವಿಕೆ) ಕ್ರಮ ಕುರಿತು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

OR/**ಅಥವಾ**

'A' is accused of commiting theft from house of 'B'. The subject matter of the alleged theft is seized. The court acquits 'A' but orders for the delivery of subject matter to 'B'. Is the order valid.

'ಅ' ನು 'ಬ' ನ ಮನೆಯಿಂದ ಕಳ್ಳತನ ಮಾಡಿದ ಆಪಾದನೆಗೊಳಗಾಗಿದ್ದಾನೆ. ಕಳವಿನ ಮಾಲನ್ನು ತಪಸೀಲ ಮಾಡಲಾಗಿದೆ. ನ್ಯಾಯಾಲಯವು 'ಅ'ನನ್ನು ಬಿಡುಗಡೆಗೊಳಿಸಿ ಕಳವಿನ ಮಾಲನ್ನು 'ಬ'ನಿಗೆ ಕೊಡಬೇಕೆಂದು ಆದೇಶ ಹೊರಡಿಸಿದೆ. ಈ ಆದೇಶವು ಊರ್ಜಿತವೇ ?

## UNIT – V

Q. No. 5. (a) Discuss the powers of court to release offenders after admonition and on probation of good conduct. Marks : 15

ಅಪರಾಧಿಗಳನ್ನು ಛೀಮಾರಿ ನಂತರ ಹಾಗೂ ಸನ್ನಡತೆಯ ಪರಿವೀಕ್ಷಣೆಗಾಗಿ ಬಿಡುಗಡೆಗೊಳಿಸಲು ನ್ಯಾಯಾಲಯಕ್ಕಿರುವ ಅಧಿಕಾರಗಳನ್ನು ಚರ್ಚಿಸಿರಿ.

OR/**ಅಥವಾ**

State the orders which may be passed against Juveniles. Are there orders which may not be passed against them.

ಬಾಲಪರಾಧಿಗಳ ವಿರುದ್ಧ ಹೊರಡಿಸಬಹುದಾದ ಆದೇಶಗಳನ್ನು ತಿಳಿಸಿರಿ. ಅವರ ವಿರುದ್ಧ ಹೊರಡಿಸಲುಬಾರದ ಯಾವುದಾದರೂ ಆದೇಶಗಳಿವೇ ?

(b) Write short notes : Marks : 5

ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ :

Restrictions on imprisonment of offenders under 21 years of age.

21 ವರ್ಷ ವಯಸ್ಸಿಗಿಂತ ಕೆಳಗಿನ ಅಪರಾಧಿಗಳಿಗೆ ಜೈಲುಶಿಕ್ಷೆ ವಿಧಿಸಲು ಇರುವ ನಿಬಂಧನೆಗಳು.

OR/**ಅಥವಾ**

Bail of Juvenile.

ಬಾಲಪರಾಧಿಯ ಜಾಮೀನು.